# ST ALOYSIUS

(DEEMED TO BE UNIVERSITY)

MANGALURU, KARNATAKA 575003 - INDIA

ESTD : 1880

# NEWS CLIPPINGS

## 01-12-2025 TO 15-12-2025

*Udayavani 02-12-2025*

### ಸಂತ ಅಲೋಶಿಯಸ್ ಪದವಿಪೂರ್ವ ಕಾಲೇಜು: ಕಾರ್ಯಾಗಾರ

**ಮಹಾನಗರ, ಡಿ. 1:** ಸಂತ ಅಲೋಶಿಯಸ್ ಪದವಿಪೂರ್ವ ಕಾಲೇಜಿನಲ್ಲಿ ಸಂವಿಧಾನ ದಿನದ ಅಂಗವಾಗಿ ಭಾರತೀಯ ಸಂವಿಧಾನದಲ್ಲಿ ತತ್ವಶಾಸ್ತ್ರ ಎಂಬ ವಿಷಯದ ಕುರಿತು ಕಾರ್ಯಾಗಾರ ಕಾಲೇಜಿನ ಅಲಾಂಗಣದಲ್ಲಿ ಆಯೋಜಿಸಲಾಗಿತ್ತು.

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕಲಾ ಮತ್ತು ಮಾನವಿಕ ಶಾಲೆಯ ಡೀನ್ ಡಾ| ರೋಸ್ ವೀರಾ ಡಿ'ಸೋಜಾ ಅವರು ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡಿ, ಸಂವಿಧಾನವು ರಾಷ್ಟ್ರದ ಮೂಲ ಮೌಲ್ಯಗಳಾದ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಸಾಕಾರಗೊಳಿಸುತ್ತದೆ. ವೈಯಕ್ತಿಕ ಸ್ವಾತಂತ್ರ್ಯಗಳನ್ನು ಖಚಿತಪಡಿಸುವಲ್ಲಿ ಮತ್ತು ಸಾಮಾಜಿಕ ಸಾಮರಸ್ಯವನ್ನು ಉತ್ತೇಜಿಸುವಲ್ಲಿ ಮೂಲಭೂತ ಹಕ್ಕುಗಳ ಪಾತ್ರ ಅತೀ ಅಗತ್ಯ. ಈ ಹಕ್ಕುಗಳು ನಾಗರಿಕರಿಗೆ ರಕ್ಷಣೆಯಾಗಿ ಕಾರ್ಯನಿರ್ವಹಿಸುತ್ತವೆ ಹಾಗೂ ಭಾರತದ ಪ್ರಜಾಪ್ರಭುತ್ವ ಚೌಕಟ್ಟಿನ ಬೆನ್ನೆಲುಬಾಗಿ ರೂಪುಗೊಳ್ಳುತ್ತವೆ ಎಂದರು. ವಿದ್ಯಾರ್ಥಿನಿ ಹರ್ಷಿತಾ ಸ್ವಾಗತಿಸಿ, ಹರ್ಷಿತಾ ಸುವರ್ಣ ವಂದಿಸಿದರು.

*Prajavani 11-12-2025*

### ನಾಟಕ ಪ್ರದರ್ಶನ

ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.



ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನ ಇಂಗ್ಲಿಷ್ ಭಾಷಾ ವಿಭಾಗದ ರಂಗ ಅಧ್ಯಯನ ಕೇಂದ್ರದ ವತಿಯಿಂದ ಪ್ರದರ್ಶನಗೊಂಡ 'ಯೋಗಿ ವರ್ಸಸ್ ಭೋಗಿ' ನಾಟಕದ ದೃಶ್ಯ

*Deccan Herald 12-12-2025*

### IMPRESSIVE PERFORMANCE



Artistes from Punah Theatre stage 'Yogi Vs Bhogi', an English adaptation of the classic Sanskrit farce Bhagavadajjukam, at an event jointly organised by Ranga Adhyayana Kendra and the Department of English, St Aloysius Deemed-to-be-University, in Mangaluru recently. DH PHOTO/ FAKRUDDIN H

*Udayavani 12-12-2025*

## ವಿಶ್ವಸಂಸ್ಥೆಯ ಚರ್ಚಾ ಮಾದರಿ ಅನುಸರಿಸುವ ಅಲ್ ಮನ್ 3.0 ಕಾರ್ಯಕ್ರಮ

# ವಿದ್ಯಾರ್ಥಿಗಳು ನೀತಿ ನಿರ್ಧಾರಗಳ ಸಂವೇದನೆ ಅರಿಯಿರಿ: ನರ್ವಾಡೆ



**ಬಾವುಟಗುಡ್ಡೆ ಡಿ. 11:** ವಿದ್ಯಾರ್ಥಿಗಳು ಸಾರ್ವಜನಿಕ ನೀತಿ ನಿರ್ಧಾರಗಳ ಸಂವೇದನೆಯನ್ನು ಅರಿತುಕೊಳ್ಳಬೇಕು. ನೀತಿ ನಿರೂಪಣಾ ತತ್ವಗಳು ಅಗತ್ಯವಾಗಿದ್ದು ಅವುಗಳ ಬಗ್ಗೆಯೂ ಕೂಡ ಜಾಗೃತರಾಗಬೇಕು ಎಂದು ದ.ಕ. ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ್ ಕಾರ್ಭಾರಿ ಹೇಳಿದರು.

ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಆರ್ಟ್ಸ್ ಆ್ಯಂಡ್ ಹ್ಯುಮಾನಿಟೀಸ್ ನಿಕಾಯದ ರಾಜ್ಯಶಾಸ್ತ್ರ ಮತ್ತು ಮನಃಶಾಸ್ತ್ರ ವಿಭಾಗಗಳ ವತಿಯಿಂದ ವಿವಿಯ ರಾಬರ್ಟ್ ಸಿಕ್ವೇರಾ ಸಭಾಂಗಣದಲ್ಲಿ ಗುರುವಾರ ಆಯೋಜಿಸಲಾದ ವಿಶ್ವಸಂಸ್ಥೆಯ ಚರ್ಚಾ ಮಾದರಿಯನ್ನು ಅನುಸರಿಸುವ ಅಲ್ ಮನ್ 3.0 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾನು ತಂತ್ರಜ್ಞರಾಗಿದ್ದು ಬಳಿಕ ಐಎಎಸ್ ನತ್ತ ಆಕರ್ಷಿತನಾದ ವಿಚಾರ, ಸಂಶೋಧನ ಅನುಷ್ಠಾನ ಮತ್ತು ನೀತಿ ಸಂಶೋಧನೆ ಮತ್ತು ನೀತಿ ನಿರೂಪಣೆಯ ಬಗ್ಗೆ ವಿವರಿಸಿದರು.

ಸಂತ ಅಲೋಶಿಯಸ್ ಕಾಲೇಜಿನ ಮಾಜಿ ಪ್ರಾಂಶುಪಾಲ ವಂ| ಪ್ರಶಾಂತ್ ಮಾಡ್ತಾ ಮಾತನಾಡಿ, ಅನ್ಯಾಯವನ್ನು ದಿಟ್ಟವಾಗಿ ಎದುರಿಸಿ ಅದರ ವಿರುದ್ಧ ಹೋರಾಡಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ರೆಕ್ಟರ್ ಮತ್ತು ಪ್ರೊ ಚಾನ್ಸಲರ್ ವಂ| ಮೆಲ್ವಿನ್ ಜೋಸೆಫ್ ಪಿಂಟೋ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳು ಜಾಗತಿಕ ದೃಷ್ಟಿಕೋನಗಳ ಬಗ್ಗೆ ತಿಳಿದುಕೊಳ್ಳುವಂತಾಗಿದೆ ಎಂದರು.

ಸಿಬಂದಿ ಸಂಯೋಜಕರಾದ ಡಾ| ಶಾಲಿನಿ ಅಯ್ಯಪ್ಪ, ಡಾ| ಶಕೀಲಾ ಹೆಗ್ಡೆ ವಿದ್ಯಾರ್ಥಿ ಸಂಯೋಜಕಿ ವಶೀನ್ ಸಾಯಿ ಪ್ರಸಾದ್ ಮೊದಲಾದವರು ಉಪಸ್ಥಿತರಿದ್ದರು.

ಕಲೆ ಮತ್ತು ಮಾನವಿಕ ವಿಭಾಗದ ಡೀನ್ ಡಾ| ರೋಸ್ ವೀರಾ ಡಿ'ಸೋಜಾ ಸ್ವಾಗತಿಸಿದರು. ವಿದ್ಯಾರ್ಥಿ ಸಂಯೋಜಕಿ ಶ್ರಾವ್ಯ ಪ್ರಮೋದ್ ಅವರು ವಂದಿಸಿದರು. ಐಯೋಲಾ ಡಿ'ಮೆಲ್ಲೊ ಅವರು ಕಾರ್ಯಕ್ರಮ ನಿರೂಪಿಸಿದರು.

*Vijayavani 12-12-2025*

# ಸಾರ್ವಜನಿಕ ನೀತಿ ನಿರೂಪಣೆಯ ಸಂವೇದನೆ



**ಅಲುಮುನ್ ಕಾರ್ಯಕ್ರಮದಲ್ಲಿ ನರ್ವಾಡೆ ವಿನಾಯಕ್ ಕರ್ಭಾರಿ, ಫಾ.ಪ್ರಶಾಂತ್ ಮಾಡ್ತಾ, ರೆ.ಫಾ.ಮೆಲ್ವಿನ್ ಜೋಸೆಫ್ ಪಿಂಟೋ ಮೊದಲಾದವರಿದ್ದರು.**

**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಆರ್ಟ್ಸ್ ಆ್ಯಂಡ್ ಹ್ಯುಮಾನಿಟೀಸ್ ನಿಕಾಯದ ರಾಜ್ಯಶಾಸ್ತ್ರ ಮತ್ತು ಮನಶಾಸ್ತ್ರ ವಿಭಾಗಗಳು ಆಯೋಜಿಸಿದ್ದ ವಿಶ್ವಸಂಸ್ಥೆಯ ಚರ್ಚಾ ಮಾದರಿಯನ್ನು ಅನುಸರಿಸುವ 3 ದಿನಗಳ ಕಾರ್ಯಕ್ರಮ ಅಲುಮುನ್ 3.0 ಗುರುವಾರ ರಾಬರ್ಟ್ ಸಿಕ್ವೇರಾ ಸಭಾಂಗಣದಲ್ಲಿ ನಡೆಯಿತು.

ಜಿಲ್ಲಾ ಪಂಚಾಯಿತಿ ಸಿಇಒ ನರ್ವಾಡೆ ವಿನಾಯಕ್ ಕರ್ಭಾರಿ ಮುಖ್ಯ ಅತಿಥಿಯಾಗಿದ್ದರು. ಸಂಶೋಧನಾ ನೀತಿಗಳು, ಸಂಶೋಧನಾ ಅನುಷ್ಠಾನ ಹಾಗೂ ನೀತಿ ಸಂಶೋಧನೆ ಮತ್ತು ನೀತಿ ನಿರೂಪಣೆಯ ತತ್ವಗಳ ಬಗ್ಗೆ ವಿವರಿಸಿದರು. ಸೌರಶಕ್ತಿಯ ಮೂಲಕ ನವೀಕರಿಸಬಹುದಾದ ಇಂಧನ ಕ್ಷೇತ್ರದ ಬಗ್ಗೆ ವಿದ್ಯಾರ್ಥಿಗಳು ಸಾರ್ವಜನಿಕ ನೀತಿ ನಿರ್ಧಾರಗಳ ಸಂವೇದನೆಯನ್ನು ಅರಿತುಕೊಳ್ಳಬೇಕೆಂದರು.

ಸಂತ ಅಲೋಶಿಯಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಫಾ.ಪ್ರಶಾಂತ್ ಮಾಡ್ತಾ ಗೌರವ ಅತಿಥಿಯಾಗಿದ್ದರು. ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ರೆಕ್ಟರ್ ಮತ್ತು ಪ್ರೊಚಾನ್ಸಲರ್ ರೆ.ಫಾ.ಮೆಲ್ವಿನ್ ಜೋಸೆಫ್ ಪಿಂಟೋ ಅಧ್ಯಕ್ಷತೆ ವಹಿಸಿದ್ದರು. ಕಲೆ ಮತ್ತು ಮಾನವಿಕ ವಿಭಾಗದ ಡೀನ್ ಡಾ.ರೋಸ್ ವೀರಾ ಡಿಸೋಜ, ಸಿಬ್ಬಂದಿ ಸಂಯೋಜಕರಾದ ಡಾ.ಶಾಲಿನಿ ಅಯ್ಯಪ್ಪ ಮತ್ತು ಡಾ.ಶಕೀಲಾ ಹೆಗ್ಡೆ ಹಾಗೂ ವಿದ್ಯಾರ್ಥಿ ಸಂಯೋಜಕ ಶ್ರಾವ್ಯಾ ಪ್ರಮೋದ್, ವಶೀನ್ ಸಾಯಿ ಪ್ರಸಾದ್ ಉಪಸ್ಥಿತರಿದ್ದರು.

ಐಯೋಲಾ ಡಿಮೆಲ್ಲೊ ಕಾರ್ಯಕ್ರಮ ನಿರೂಪಿಸಿದರು. ಡಾ.ರೋಸ್ ವೀರಾ ಡಿಸೋಜ ಸ್ವಾಗತಿಸಿದರು. ಶ್ರಾವ್ಯ ಪ್ರಮೋದ್ ವಂದಿಸಿದರು.

*Times of India 12-12-2025*

## Almun 3.0 held

The inauguration of the three-day programme, which replicates the United Nations Simulations titled Almun 3.0, organised by the departments of political science and psychology, the school of arts and humanities, of St Aloysius (Deemed to be University), Mangaluru, was held on Thursday. Narwade Vinayak, ZP CEO, was the chief guest. Fr Prashanth Madtha, former principal, was guest of honour.

*Times of India 13-12-2025*

## Talk on Onake Obavva delivered

**Mangaluru:** The department of history, School of Arts and Humanities, St Aloysius (Deemed to be University), in collaboration with the department of language and culture, govt of Karnataka, recently hosted a guest talk to commemorate the sacrifice of Onake Obavva, a legendary woman of Karnataka. The event featured Mahesh Nayak, author, as the chief guest, who delivered a lecture on the relevance of Obavva in the modern context.

*Varthabharathi 14-12-2025*

# ಮಂಗಳೂರು: ಅಲೋಶಿಯಸ್ ವಿವಿಯಲ್ಲಿ 'ಅಲ್ಮನ್ 3.0' ಉದ್ಘಾಟನೆ



ಮಂಗಳೂರು, ಡಿ.13: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಆರ್ಟ್ಸ್ ಆಂಡ್ ಹ್ಯುಮಾನಿಟೀಸ್ ನಿಕಾಯದ ರಾಜ್ಯಶಾಸ್ತ್ರ ಮತ್ತು ಮನಃ ಶಾಸ್ತ್ರ, ವಿಭಾಗಗಳು ಆಯೋಜಿಸಿದ್ದ ವಿಶ್ವಸಂಸ್ಥೆಯ ಚರ್ಚಾ ಮಾದರಿಯನ್ನು ಅನುಸರಿಸುವ ಮೂರು ದಿನಗಳ ಕಾರ್ಯಕ್ರಮ 'ಅಲ್ಮನ್ 3.0' ಉದ್ಘಾಟನೆ ಗುರುವಾರ ನಡೆಯಿತು.

ಕಾಲೇಜಿನ ರಾಬರ್ಟ್ ಸಿಕ್ವೇರ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲಾ ಪಂಚಾಯತ್ ಸಿಇಒ ನರ್ವಾಡೆ ವಿನಾಯಕ್ ಮಾತನಾಡಿ, ಸಂಶೋಧನಾ ನೀತಿಗಳು, ಸಂಶೋಧನಾ ಅನುಷ್ಠಾನ ಹಾಗೂ ನೀತಿ ಸಂಶೋಧನೆ ಮತ್ತು ನೀತಿ ನಿರೂಪಣೆಯ ತತ್ವಗಳ ಬಗ್ಗೆ ವಿವರಿಸಿದರು. ಸೌರಶಕ್ತಿಯ ಮೂಲಕ ನವೀಕರಿಸಬಹುದಾದ ಇಂಧನ ಕ್ಷೇತ್ರದ ಬಗ್ಗೆ ಮಾಹಿತಿ ನೀಡಿದ ಅವರು, ವಿದ್ಯಾರ್ಥಿಗಳು ಸಾರ್ವಜನಿಕ ನೀತಿ ನಿರ್ಧಾರಗಳ ಸಂವೇದನೆಯನ್ನು ಅರಿತುಕೊಳ್ಳಬೇಕೆಂದು ಸಲಹೆ ನೀಡಿದರು.

ಸಂತ ಅಲೋಶಿಯಸ್‌ಕಾಲೇಜಿನ ಮಾಜಿ ಪ್ರಾಂಶುಪಾಲ ಫಾ.ಪ್ರಶಾಂತ್ ಮಾಡ್ತಾ ಗೌರವ ಅತಿಥಿಯಾಗಿ ಭಾಗವಹಿಸಿದ್ದರು. ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ರೆಕ್ಟರ್ ಮತ್ತು ಪ್ರೊ.ಚಾನ್ಸಲರ್ ಫಾ.ಮೆಲ್ವಿನ್ ಜೋಸೆಫ್ ಪಿಂಟೊ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಸಿಬ್ಬಂದಿ ಸಂಯೋಕರಾದ ಡಾ.ಶಾಲಿನಿ ಅಯ್ಯಪ್ಪ ಮತ್ತು ಡಾ.ಶಕೀಲಾ ಹೆಗ್ಡೆ ಹಾಗೂ ವಿದ್ಯಾರ್ಥಿ ಸಂಯೋಜಕರಾದ ವಶೀನ್ ಸಾಯಿ ಪ್ರಸಾದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಐಯೋಲಾ ಡಿಮೆಲ್ಲೊ ಕಾರ್ಯಕ್ರಮ ನಿರೂಪಿಸಿದರು. ಕಲೆ ಮತ್ತು ಮಾನವಿಕ ವಿಭಾಗದ ಡೀನ್ ಡಾ.ರೋಸ್ ವೀರಾ ಡಿಸೋಜ ಸ್ವಾಗತಿಸಿದರು. ವಿದ್ಯಾರ್ಥಿ ಸಂಯೋಜಕಿ ಶ್ರಾವ್ಯಾ ಪ್ರಮೋದ್ ವಂದಿಸಿದರು.

*Vijayavani 14-12-2025*

# ಕದ್ರಿ ಪಾರ್ಕ್‌ನಲ್ಲಿ ಸೌಹಾರ್ದ ಕ್ರಿಸ್‌ಮಸ್ ಉದ್ಘಾಟನೆ

ಮಂಗಳೂರು: ಸಂತ ಮದರ್ ತೆರೆಸಾ ವೇದಿಕೆ ಮತ್ತು ಕೆಥೋಲಿಕ್ ಸಭಾ ಮಂಗ್ಳೂರ್ ಪ್ರದೇಶ್ ಆಶ್ರಯದಲ್ಲಿ ನಗರದ ಕದ್ರಿ ಉದ್ಯಾನವನದಲ್ಲಿ ಹಮ್ಮಿಕೊಂಡಿರುವ ಸೌಹಾರ್ದ ಕ್ರಿಸ್‌ಮಸ್ ಉತ್ಸವಕ್ಕೆ ರಾಷ್ಟ್ರೀಯ ಯುವ ಕ್ರೀಡಾಪಟು ಯುವರಾಜ್ ಕುಂದರ್ ಕೇಕ್ ಕತ್ತರಿಸುವುದರ ಮೂಲಕ ಚಾಲನೆ ನೀಡಿದರು.

ಸಂದೇಶ ಪ್ರತಿಷ್ಠಾನದ ನಿರ್ದೇಶಕ ಸುದೀಪ್ ಕ್ರಿಸ್‌ಮಸ್ ಸಂದೇಶ ನೀಡಿದರು. ಮುಖ್ಯ ಅತಿಥಿ ಸಂತ ಅಲೋಶಿಯಸ್ ಕಾಲೇಜಿನ ಪ್ರಾಧ್ಯಾಪಕ ಡಾ.ಚಾರ್ಲ್ಸ್ ಫುರ್ಟಾಡೋ ಶುಭಹಾರೈಸಿದರು. ಸಾಮಾಜಿಕ ಹೋರಾಟಗಾರ ಮುನೀರ್ ಕಾಟಿಪಳ್ಳ, ಸಮಾಜದಲ್ಲಿ ಸೌಹಾರ್ದತೆಯ ಅಗತ್ಯವನ್ನು ಪ್ರತಿಪಾದಿಸಿ, ನಾಡಿನಲ್ಲಿ ಶಾಂತಿ ನೆಲೆಸಲು ಯೇಸುಕ್ರಿಸ್ತನ ಆದರ್ಶಗಳನ್ನು ಪಾಲಿಸಬೇಕು ಎಂದರು.

ಬ್ಯಾಂಕ್ ನೌಕರರ ಸಂಘದ ಮುಖಂಡ, ಕಲಾವಿದ ಶ್ಯಾಮ್‌ಸುಂದರ್ ಮಾತನಾಡಿ, ಜಗತ್ತು ಸುಂದರವಾಗಿರಲು ಪ್ರೀತಿ, ಸಹಬಾಳ್ವೆಯ ಮಹತ್ವ ತಿಳಿಸಿದರು.




ಸೌಹಾರ್ದ ಕ್ರಿಸ್‌ಮಸ್ ಉತ್ಸವದಲ್ಲಿ ಕ್ರೀಡಾ ಸಾಧಕ ಯುವರಾಜ್ ಕುಂದರ್ ಅವರನ್ನು ಸನ್ಮಾನಿಸಲಾಯಿತು. ಸುದೀಪ್, ಡಾ.ಚಾರ್ಲ್ಸ್ ಫುರ್ಟಾಡೋ, ರಾಯ್ ಕ್ಯಾಸ್ತೆಲಿನೊ ಮೊದಲಾದವರು ಉಪಸ್ಥಿತರಿದ್ದರು.

ರಾಷ್ಟ್ರಮಟ್ಟದಲ್ಲಿ ಮಿಂಚುತ್ತಿರುವ ಸ್ಕೇಟಿಂಗ್ ಪಟು ಯುವರಾಜ್ ಕುಂದರ್ ಅವರನ್ನು ಸನ್ಮಾನಿಸಲಾಯಿತು. ದಾನಿ ಮೈಕಲ್ ಡಿಸೋಜರನ್ನು ಗೌರವಿಸಲಾಯಿತು. ಕ್ರಿಸ್‌ಮಸ್ ಖೇಲ್ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಸಂತ ಆಗ್ನೆಸ್ ಕಾಲೇಜು ಪ್ರಥಮ, ಸಂತ ಅಲೋಶಿಯಸ್ ದ್ವಿತೀಯ ಹಾಗೂ ಸೀತಾ ಭಟ್ ಬಳಗ ತೃತೀಯ ಬಹುಮಾನ ಗಳಿಸಿತು.

ವೇದಿಕೆ ಅಧ್ಯಕ್ಷ ರಾಯ್ ಕ್ಯಾಸ್ತೆಲಿನೊ ಅಧ್ಯಕ್ಷತೆ ವಹಿಸಿದ್ದರು. ಕೆಥೋಲಿಕ್ ಸಭಾ ಅಧ್ಯಕ್ಷ ಸಂತೋಷ್ ಡಿಸೋಜ, ಪರಿಸರ ಪ್ರವಾಸೋದ್ಯಮ ನಿಗಮದ ಅಧ್ಯಕ್ಷೆ ಶಾಲೆಟ್ ಪಿಂಟೊ, ಉದ್ಯಮಿ ಸಂತೋಷ್ ಸಿಕ್ವೇರಾ, ಡೊಲ್ಫಿ ಡಿಸೋಜ, ವಿಲ್ಮಾ ಮೊಂತೇರೊ ಉಪಸ್ಥಿತರಿದ್ದರು. ವೇದಿಕೆ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್ ಸ್ವಾಗತಿಸಿದರು. ಜಾನ್ ರೋಹನ್ ನಿರ್ವಹಿಸಿ, ಉತ್ಸವದ ಸಂಚಾಲಕ ಸ್ಟ್ಯಾನಿ ಲೋಬೊ ವಂದಿಸಿದರು.

Udayavani 14-12-2025




**ಕೃತಿ: ಭಾಲಾವಲೀಕಾರ್ ಸಾರಸ್ವತ್ ಇತಿಹಾಸ್ ಆಣಿ ಸಂಸ್ಕಾರ್ ವಿಧಿ-ವಿಧಾನ್**
**ಲೇಖಕರು: ಚಂದ್ರಕಲಾ ನಾಯಕ್**
**ಪ್ರಕಾಶನ: ಸಂತ ಅಲೋಶಿಯಸ್ ಪ್ರಕಾಶನ ಮಂಗಳೂರು - 575003**
**ಬೆಲೆ: 100 ರೂ.**

ಇದೊಂದು ಕೊಂಕಣಿ ಭಾಷಾ ಕೃತಿ. ಭಾಲಾವಲೀಕಾರ್ ಸಾರಸ್ವತ್ ಸಮುದಾಯದ ಇತಿಹಾಸ ಮತ್ತು ಸಂಸ್ಕಾರ, ವಿಧಿ-ವಿಧಾನಗಳ ಕುರಿತು ಬರೆದ ಕೃತಿಯಾಗಿದೆ.

Udayavani 14-12-2025

# ಕದ್ರಿ ಪಾರ್ಕ್‌ನಲ್ಲಿ ಸೌಹಾರ್ದ ಕ್ರಿಸ್ಮಸ್ ಉತ್ಸವ



**ಕದ್ರಿ, ಡಿ. 13:** ಸಂತ ಮದರ್ ತೆರೆಸಾ ವೇದಿಕೆ ಮತ್ತು ಕೆಥೊಲಿಕ್ ಸಭಾ ಮಂಗ್ಳುರ್‌ಪ್ರದೇಶ್ ಜಂಟಿ ಆಶ್ರಯದಲ್ಲಿ ನಗರದ ಕದ್ರಿ ಉದ್ಯಾನವನದಲ್ಲಿ ಸೌಹಾರ್ದ ಕ್ರಿಸ್ಮಸ್ ಉತ್ಸವ ನಡೆಯಿತು.

ರಾಷ್ಟ್ರೀಯ ಯುವ ಕ್ರೀಡಾಪಟು, ವಿದ್ಯಾರ್ಥಿ ಯುವರಾಜ್ ಕುಂದರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಂದೇಶ ಪ್ರತಿಷ್ಠಾನದ ನಿರ್ದೇಶಕ ವಂ| ಸುದೀಪ್ ಕ್ರಿಸ್ಮಸ್ ಸಂದೇಶ ನೀಡಿದರು. ಮುಖ್ಯ ಅತಿಥಿ ಸಂತ ಅಲೋಶಿಯಸ್ ಕಾಲೇಜಿನ ಪ್ರಾಧ್ಯಾಪಕ ಡಾ| ಚಾರ್ಲ್ಸ್ ಫುರ್ಟಾಡೊ ಶುಭನುಡಿಗಳನ್ನಾಡಿದರು. ಸಾಮಾಜಿಕ ಹೋರಾಟಗಾರ ಮುನೀರ್ ಕಾಟಿಪಳ್ಳ ಸಮಾಜದಲ್ಲಿ ಸೌಹಾರ್ದತೆಯ ಅಗತ್ಯವನ್ನು ಪ್ರತಿಪಾದಿಸಿ, ನಾಡಿನಲ್ಲಿ ಶಾಂತಿ ನೆಲೆಸಲು ಯೇಸುಕ್ರಿಸ್ತನ ಆದರ್ಶಗಳನ್ನು ಪಾಲಿಸಬೇಕೆಂದು ತಿಳಿಸಿದರು.

ಅತಿಥಿ, ಬ್ಯಾಂಕ್ ನೌಕರರ ಸಂಘದ ಮುಖಂಡ, ಕಲಾವಿದ ಶ್ಯಾಮ್ ಸುಂದರ್ ಜಗತ್ತು ಸುಂದರವಾಗಿರಲು ಪ್ರೀತಿ, ಸಹಬಾಳ್ವೆಯ ಮಹತ್ವ ತಿಳಿಸಿದರು.

ರಾಷ್ಟ್ರ ಮಟ್ಟದಲ್ಲಿ ಮಿಂಚುತ್ತಿರುವ ಸ್ಕೇಟಿಂಗ್ ಪಟು ಯುವರಾಜ್ ಕುಂದರ್ ಅವರನ್ನು ಸಮ್ಮಾನಿಸಲಾಯಿತು. ಕೊಡುಗೈ ದಾನಿ ಮೈಕಲ್ ಡಿ'ಸೋಜಾರನ್ನು ಗೌರವಿಸಲಾಯಿತು. ಕ್ರಿಸ್ಮಸ್ ಖೇಲ್ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಸಂತ ಆ್ಯಗ್ನೆಸ್ ಕಾಲೇಜು ಪ್ರಥಮ, ಸಂತ ಅಲೋಶಿಯಸ್ ದ್ವಿತೀಯ ಹಾಗೂ ಸೀತಾ ಭಟ್ ಬಳಗ ತೃತೀಯ ಬಹುಮಾನ ಗಳಿಸಿದರು.

ಅಧ್ಯಕ್ಷತೆಯನ್ನು ವೇದಿಕೆಯ ಅಧ್ಯಕ್ಷ ರಾಯ್ ಕ್ಯಾಸ್ತೆಲಿನೊ ವಹಿಸಿದ್ದರು. ಕೆಥೊಲಿಕ್ ಸಭಾ ಅಧ್ಯಕ್ಷ ಸಂತೋಷ್ ಡಿ'ಸೋಜಾ, ಪರಿಸರ ಪ್ರವಾಸೋದ್ಯಮ ನಿಗಮದ ಅಧ್ಯಕ್ಷೆ ಶಾಲೆಟ್ ಪಿಂಟೊ, ಉದ್ಯಮಿ ಸಂತೋಷ್ ಸಿಕ್ವೇರಾ, ಡೊಲ್ಫಿ ಡಿ'ಸೋಜಾ, ವಿಲ್ಮಾ ಮೊಂತೇರೊ ಉಪಸ್ಥಿತರಿದ್ದರು. ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿ, ಜಾನ್ ರೋಹನ್ ನಿರ್ವಹಿಸಿ, ಉತ್ಸವದ ಸಂಚಾಲಕ ಸ್ಟ್ಯಾನಿ ಲೋಬೊ ವಂದಿಸಿದರು.

Varthabharathi 14-12-2025

# ಕದ್ರಿ ಪಾರ್ಕ್‌ನಲ್ಲಿ ಸೌಹಾರ್ದ ಕ್ರಿಸ್ಮಸ್ ಉತ್ಸವ ಉದ್ಘಾಟನೆ

ಮಂಗಳೂರು, ಡಿ.13: ಸಂತ ಮದರ್ ತೆರೆಸಾ ವೇದಿಕೆ ಮತ್ತು ಕೆಥೊಲಿಕ್ ಸಭಾ ಮಂಗ್ಳುರ್ ಪ್ರದೇಶ್ (ರಿ) ಜಂಟಿ ಆಶ್ರಯದಲ್ಲಿ ನಗರದ ಕದ್ರಿ ಉದ್ಯಾನವನದಲ್ಲಿ ಹಮ್ಮಿಕೊಂಡಿರುವ ಸೌಹಾರ್ದ ಕ್ರಿಸ್ಮಸ್ ಉತ್ಸವ ಶನಿವಾರ ಉದ್ಘಾಟನೆಗೊಂಡಿತು.

ರಾಷ್ಟ್ರೀಯ ಯುವ ಕ್ರೀಡಾಪಟು, ವಿದ್ಯಾರ್ಥಿ ಯುವರಾಜ್ ಕುಂದರ್ ಕೇಕ್ ಕತ್ತರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಂದೇಶ ಪ್ರತಿಷ್ಠಾನದ ನಿರ್ದೇಶಕ ಸುದೀಪ್ ಕ್ರಿಸ್ಮಸ್ ಸಂದೇಶ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಪ್ರಾಧ್ಯಾಪಕ ಡಾ.ಚಾರ್ಲ್ಸ್ ಫುರ್ಟಾಡೊ ಮತ್ತು ಸಾಮಾಜಿಕ ಹೋರಾಟಗಾರ ಮುನೀರ್ ಕಾಟಿಪಳ್ಳ ಹಾಗೂ ಕಲಾವಿದ ಶ್ಯಾಮ್‌ಸುಂದರ್ ಶುಭ ಹಾರೈಸಿದರು.

ರಾಷ್ಟ್ರಮಟ್ಟದಲ್ಲಿ ಮಿಂಚುತ್ತಿರುವ ಸ್ಕೇಟಿಂಗ್ ಪಟು ಯುವರಾಜ್ ಕುಂದರ್‌ರನ್ನು ಸನ್ಮಾನಿಸಲಾಯಿತು. ದಾನಿ ಮೈಕಲ್ ಡಿಸೋಜರನ್ನು ಗೌರವಿಸಲಾಯಿತು.

ಕ್ರಿಸ್ಮಸ್ ಟೇಲ್‌ಸ್ಪರ್ಧೆಯಲ್ಲಿ ವಿಜೇತರಾದ ಸಂತ ಆಗ್ನೆಸ್ ಕಾಲೇಜು (ಪ್ರಥಮ), ಸಂತ ಅಲೋಶಿಯಸ್ ಕಾಲೇಜು (ದ್ವಿತೀಯ), ಸೀತಾ ಭಟ್ ಬಳಗ (ತೃತೀಯ)ಕ್ಕೆ ಬಹುಮಾನ ವಿತರಿಸಲಾಯಿತು.

ಅಧ್ಯಕ್ಷ ರಾಯ್ ಕ್ಯಾಸ್ತೆಲಿನೊ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಕೆಥೊಲಿಕ್ ಸಭಾ ಅಧ್ಯಕ್ಷ ಸಂತೋಷ್ ಡಿಸೋಜ, ಪ್ರವಾಸೋದ್ಯಮ ನಿಗಮದ ಅಧ್ಯಕ್ಷೆ ಶಾಲೆಟ್ ಪಿಂಟೊ, ಉದ್ಯಮಿ ಸಂತೋಷ್ ಸಿಕ್ವೇರ, ಡೊಲ್ಫಿ ಡಿಸೋಜ, ವಿಲ್ಮಾ ಮೊಂತೇರೊ ಉಪಸ್ಥಿತರಿದ್ದರು.

ವೇದಿಕೆಯ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್ ಸ್ವಾಗತಿಸಿದರು. ಜಾನ್ ದೋಹನ್ ಕಾರ್ಯಕ್ರಮ ನಿರೂಪಿಸಿದರು. ಉತ್ಸವದ ಸಂಚಾಲಕ ಸ್ಟ್ಯಾನಿ ಲೋಬೊ ವಂದಿಸಿದರು.



*Samyuktha Karnataka 14-12-2025*

# ಸೌಹಾರ್ದದ ಕ್ರಿಸ್ಮಸ್ ಉತ್ಸವ



**ಸಂ.ಕ.ಸಮಾಚಾರ, ಮಂಗಳೂರು**

ಸಂತ ಮದರ್ ತೆರೇಸಾ ವೇದಿಕೆ ಮತ್ತು ಕಥೊಲಿಕ್ ಸಭಾ ಮಂಗ್ಳೂರ್ ಪ್ರದೇಶ್ (ರಿ) ಜಂಟಿ ಆಶ್ರಯದಲ್ಲಿ ನಗರದ ಕದ್ರಿ ಉದ್ಯಾನವನದಲ್ಲಿ ಹಮ್ಮಿಕೊಂಡಿರುವ ಸೌಹಾರ್ದ ಕ್ರಿಸ್ಮಸ್ ಉತ್ಸವ ಶನಿವಾರ ಸಂಜೆ ರಾಷ್ಟ್ರೀಯ ಯುವ ಕ್ರೀಡಾಪಟು, ವಿದ್ಯಾರ್ಥಿ ಯುವರಾಜ್ ಕುಂದರ್ ಕೇಕ್ ಕತ್ತರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸಂದೇಶ ಪ್ರತಿಷ್ಠಾನದ ನಿರ್ದೇಶಕ ವಂ. ಸುದೀಪ್ ಕ್ರಿಸ್ಮಸ್ ಸಂದೇಶ ನೀಡಿದರು. ಮುಖ್ಯ ಅತಿಥಿ ಸಂತ ಅಲೋಶಿಯಸ್ ಕಾಲೇಜಿನ ಪ್ರಾಧ್ಯಾಪಕ ಡಾ. ಚಾರ್ಲ್ಸ್ ಫುರ್ಟಾಡೊ ಶುಭನುಡಿಗಳನ್ನಾಡಿದರು. ಸಾಮಾಜಿಕ ಹೋರಾಟಗಾರ ಮುನೀರ್ ಕಾಟಿಪಳ್ಳ ಸಮಾಜದಲ್ಲಿ ಸೌಹಾರ್ದತೆಯ ಅಗತ್ಯವನ್ನು ಪ್ರತಿಪಾದಿಸಿ, ನಾಡಿನಲ್ಲಿ ಶಾಂತಿ ನೆಲೆಸಲು ಯೇಸುಕ್ರಿಸ್ತನ ಆದರ್ಶಗಳನ್ನು ಪಾಲಿಸಬೇಕೆಂದು ಕರೆ ನೀಡಿದರು.

ಅತಿಥಿ, ಬ್ಯಾಂಕ್ ನೌಕರರ ಸಂಘದ ಮುಖಂಡ, ಕಲಾವಿದ ಶ್ಯಾಮ್ ಸುಂದರ್ ಜಗತ್ತು ಸುಂದರವಾಗಿರಲು ಪ್ರೀತಿ, ಸಹಬಾಳ್ವೆಯ ಮಹತ್ವ ತಿಳಿಸಿದರು.

ರಾಷ್ಟ್ರ ಮಟ್ಟದಲ್ಲಿ ಮಿಂಚುತ್ತಿರುವ ಸ್ಕೇಟಿಂಗ್ ಪಟು ಯುವರಾಜ್ ಕುಂದರ್ ಅವರನ್ನು ಸನ್ಮಾನಿಸಲಾಯಿತು. ಕೊಡುಗೈ ದಾನಿ ಮೈಕಲ್ ಡಿಸೋಜಾರನ್ನು ಗೌರವಿಸಲಾಯಿತು. ಕ್ರಿಸ್ಮಸ್ ಖೇಲ್ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಸಂತ ಆಗ್ನೆಸ್ ಕಾಲೇಜು ಪ್ರಥಮ, ಸಂತ ಅಲೋಶಿಯಸ್ ದ್ವಿತೀಯ ಹಾಗೂ ಸೀತಾ ಭಟ್ ಬಳಗ ತೃತೀಯ ಬಹುಮಾನ ಗಳಿಸಿದರು.

ಅಧ್ಯಕ್ಷತೆಯನ್ನು ವೇದಿಕೆಯ ಅಧ್ಯಕ್ಷ ರಾಯ್ ಕ್ಯಾಸ್ತೆಲಿನೊ ವಹಿಸಿದ್ದರು. ಕಥೊಲಿಕ್ ಸಭಾ ಅಧ್ಯಕ್ಷ ಸಂತೋಷ್ ಡಿ'ಸೋಜ, ಪರಿಸರ ಪ್ರವಾಸೋದ್ಯಮ ನಿಗಮದ ಅಧ್ಯಕ್ಷೆ ಶಾಲೆಟ್ ಪಿಂಟೊ, ಉದ್ಯಮಿ ಸಂತೋಷ್ ಸಿಕ್ವೇರಾ, ಡೊಲ್ಫಿ ಡಿಸೋಜ, ವಿಲ್ಮಾ ಮೊಂತೇರೊ ಉಪಸ್ಥಿತರಿದ್ದರು.

ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿದರು. ಜಾನ್ ರೋಹನ್ ಕಾರ್ಯಕ್ರಮ ನಿರ್ವಹಿಸಿ, ಉತ್ಸವದ ಸಂಚಾಲಕ ಸ್ಟ್ಯಾನಿ ಲೋಬೊ ವಂದಿಸಿದರು.

Udayavani 14-12-2025

# ಅಲೋಶಿಯಸ್ ವಿವಿಯಲ್ಲಿ ಒನಕೆ ಓಬವ್ವ: ಅತಿಥಿ ಉಪನ್ಯಾಸ



**ಬಾವುಟಗುಡ್ಡೆ ಡಿ. 13:** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾ ನಿಲಯದ ಕಲಾ, ಮಾನವಿಕ ಶಾಲೆಯ ಇತಿಹಾಸ ವಿಭಾಗದಿಂದ ಕರ್ನಾಟಕದ ದಂತ ಕಥೆಯ ನಿರ್ಭೀತ ಮಹಿಳೆ 'ಒನಕೆ ಓಬವ್ವ' ಅವರ ತ್ಯಾಗವನ್ನು ಸ್ಮರಿಸಲು ಅತಿಥಿ ಉಪನ್ಯಾಸ ಹಮ್ಮಿಕೊಳ್ಳಲಾಯಿತು.

ಮುಖ್ಯ ಅತಿಥಿಯಾಗಿ ಲೇಖಕ ಮಹೇಶ್ ನಾಯಕ್ ಭಾಗವಹಿಸಿದ್ದರು. ಆಧುನಿಕ ಯುಗದಲ್ಲಿ ಓಬವ್ವನ ಪ್ರಸ್ತುತತೆ ಕುರಿತು ಅವರು ಉಪನ್ಯಾಸ ನೀಡಿದರು.

ಕಲಾ ಮತ್ತು ಮಾನವಿಕ ಶಾಲೆಯ ಡೀನ್ ಡಾ| ರೋಸ್ ವೀರಾ ಡಿ'ಸೋಜಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರಾಜೇಶ್, ಇತಿಹಾಸ ವಿಭಾಗದ ಮುಖ್ಯಸ್ಥೆ ಡಾ| ಮೋನಾ ಮೆಂಡೋನ್ಸಾ, ಸಿಬಂದಿ ಕಿಶೋರ್‌ಚಂದ್ರ, ಶಿಲ್ಪಲತಾ, ವಿದ್ಯಾರ್ಥಿ ಸಂಯೋಜಕ ಲೋಕೇಶ್ ಉಪಸ್ಥಿತರಿದ್ದರು. ಅಂತಿಮ ವರ್ಷದ ಇತಿಹಾಸ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಯಿತು. ತೃತೀಯ ಬಿಎ ವಿದ್ಯಾರ್ಥಿನಿ ಭವಿತಾ ನಿರೂಪಿಸಿದರು.

Udayavani 15-12-2025

# ಅಲೋಶಿಯಸ್ ವಿ.ವಿ.ಯಲ್ಲಿ ಹಿರಿಯರ ಆರೈಕೆ ಕೋರ್ಸ್ ಪ್ರಮಾಣಪತ್ರ ವಿತರಣೆ



**ಬಾವುಟಗುಡ್ಡೆ ಡಿ. 14:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯವು ಡೀಡ್ಸ್ ಸಂಸ್ಥೆಯ ಸಹಯೋಗದೊಂದಿಗೆ ಆರೈಕೆದಾರರಿಗಾಗಿ ಆಯೋಜಿಸಿದ ಮೊಟ್ಟಮೊದಲ ಹಿರಿಯರ ಆರೈಕೆ (ವೈದ್ಯಕೀಯೇತರ) ತರಬೇತಿ ಕೋರ್ಸ್‌ನ ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮ ವಿವಿಯ ಸಾನ್ನಿಧ್ಯ ಸಭಾಂಗಣದಲ್ಲಿ ನಡೆಯಿತು.

ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್‌ ವಂ। ಮೆಲ್ವಿನ್ ಜೋಸೆಫ್ ಪಿಂಟೊ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅಲೋಶಿಯಸ್ ವಿ.ವಿ.ಯ ಉಪಕುಲಪತಿ ವಂ। ಡಾ। ಪ್ರವೀಣ್ ಮಾರ್ಟಿಸ್, ರಿಜಿಸ್ಟ್ರಾರ್ ಡಾ। ರೊನಾಲ್ಡ್ ನಜರೆತ್, ಕಲಾವಿದ ಮತ್ತು ನಿರ್ದೇಶಕ, ಮೋಹನಚಂದ್ರ ಉರ್ವ, ಕೋರ್ಸ್ ಸಂಯೋಜಕರಾದ ಆಶಿತಾ ಜೇನ್ ಪಿಂಟೊ ಮತ್ತು ಉಷಾ ಪಿರೇರಾ ಉಪಸ್ಥಿತರಿದ್ದರು.

ಲಿಖಿತ ಪರೀಕ್ಷೆಗಳು ಮತ್ತು ವೈವಾ–ವೋಸ್ ಮೂಲಕ ಮೌಲ್ಯಮಾಪನ ಮಾಡಲಾಗಿದ್ದು ತರಬೇತಿ ಪಡೆದವರಿಗೆ ಪ್ರಮಾಣಪತ್ರ ವಿತರಿಸಲಾಯಿತು. ಡಾ। ದಿನೇಶ್ ನಾಯಕ್ ಕಾರ್ಯಕ್ರಮ ನಿರೂಪಿಸಿದರು.

*Vijayakarnataka* 15-12-2025

# ಅಲೋಶಿಯಸ್‌ನಲ್ಲಿ ಆಲ್ಮನ್ 3.0 ಉದ್ಘಾಟನೆ



ಜಿಪಂ ಸಿಇಒ ನಾರ್ವಡೆ ವಿನಾಯಕ್ ಕಾರ್ಭಾರಿ ಕಾರ್ಯಕ್ರಮ ಉದ್ಘಾಟಿಸಿದರು.

■ **ವಿಕ ಸುದ್ದಿಲೋಕ** ಮಂಗಳೂರು

ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಆರ್ಟ್ಸ್ ಆ್ಯಂಡ್ ಹ್ಯುಮಾನಿಟೀಸ್ ನಿಕಾಯದ ರಾಜ್ಯಶಾಸ್ತ್ರ ಮತ್ತು ಮನಃಶಾಸ್ತ್ರ ವಿಭಾಗ ಆಯೋಜಿಸಿದ್ದ ವಿಶ್ವಸಂಸ್ಥೆಯ ಚರ್ಚಾ ಮಾದರಿಯನ್ನು ಅನುಸರಿಸುವ ಮೂರು ದಿನಗಳ ಕಾರ್ಯಕ್ರಮ ಆಲ್ಮನ್ 3.0ನ ಉದ್ಘಾಟನೆ ಗುರುವಾರ ರಾಬರ್ಟ್ ಸಿಕ್ವೇರ ಸಭಾಂಗಣದಲ್ಲಿ ನಡೆಯಿತು.

ಜಿಪಂ ಸಿಇಒ ನಾರ್ವಡೆ ವಿನಾಯಕ್ ಕಾರ್ಭಾರಿ ಕಾರ್ಯಕ್ರಮ ಉದ್ಘಾಟಿಸಿದರು..

ಅಲೋಶಿಯಸ್ ಶಿಕ್ಷಣ ಸಂಸ್ಥೆಗಳ ಪ್ರೊಚಾನ್ಸೆಲರ್ ಫಾ. ಮೆಲ್ವಿನ್ ಜೋಸೆಫ್ ಪಿಂಟೋ ಅಧ್ಯಕ್ಷತೆ ವಹಿಸಿದ್ದರು. ಸೈಂಟ್ ಅಲೋಶಿಯಸ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ಫಾ. ಪ್ರಶಾಂತ್ ಮಾಡ್ತಾ, ಸಿಬ್ಬಂದಿ ಸಂಯೋಜಕರಾದ ಡಾ. ಶಾಲಿನಿ ಅಯ್ಯಪ್ಪ, ಡಾ. ಶಕೀಲಾ ಹೆಗ್ಡೆ, ವಿದ್ಯಾರ್ಥಿ ಸಂಯೋಜಕ ವಶೀನ್ ಸಾಯಿ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು. ಕಲೆ ಮತ್ತು ಮಾನವಿಕ ವಿಭಾಗದ ಡೀನ್ ಡಾ. ರೋಸ್ ವೀರಾ ಡಿಸೋಜಾ ಸ್ವಾಗತಿಸಿದರು. ವಿದ್ಯಾರ್ಥಿ ಸಂಯೋಜಕಿ ಶ್ರಾವ್ಯ ಪ್ರಮೋದ್ ವಂದಿಸಿದರು. ಐಯೋಲಾ ಡಿಮೆಲ್ಲೊ ನಿರೂಪಿಸಿದರು.

Udayavani 14-12-2025

# ಗೋವಾದಲ್ಲಿ ರಂಗುರಂಗಿನ ಕೇಶವಿನ್ಯಾಸ







ನಡು ನೆತ್ತಿಯ ಮೇಲೆ ಏರಿದ ಸೂರ್ಯ, ಸುಡುವ ಬಿಸಿಲು, ಸಂಜೆ ಹೊತ್ತಿಗೆ ತಂಪಾಗಿ ಬೀಸುವ ಉಪ್ಪು ಮಿಶ್ರಿತ ಗಾಳಿ, ಸ್ವಿಮ್ಮಿಂಗ್ ಪೂಲ್‌ನಂತೆ ಭಾಸವಾಗುವ ಸಮುದ್ರದ ಅಲೆಗಳ ಜತೆ ಆಟವಾಡುವ ಜನರು... ಈ ಎಲ್ಲ ದೃಶ್ಯಗಳು ಸಾಮಾನ್ಯವಾಗಿ ಕಂಡುಬರುವುದು ಪ್ರಸಿದ್ಧ ಕಡಲತೀರದ ನಗರ ಗೋವಾದಲ್ಲಿ.

ಪ್ರವಾಸಿಗರನ್ನು ತನ್ನತ್ತ ಸೆಳೆಯುವ ಗೋವಾಗೆ, ಅಲ್ಪದರದಲ್ಲಿ ಲಭ್ಯವಿರುವ ಮದ್ಯ ಖರೀದಿಸಲೆಂದೇ ಬರುವವರು ಅನೇಕರು. ಇದರ ಹೊರತಾಗಿ ರಜೆಯಲ್ಲಿ ಮಜಾ ಮಾಡಬೇಕೆಂದು ಬರುವ ಮಹಿಳಾ ಪ್ರವಾಸಿಗರನ್ನು ಮುಖ್ಯವಾಗಿ ಆಕರ್ಷಿಸುವುದೇ 'ಹೇರ್ ಬ್ರೇಡ್'. ಹೌದು ನೀಳವಾಗಿರುವ ಕೇಶರಾಶಿಗೆ ಬಣ್ಣ ಬಣ್ಣದ ದಾರಗಳನ್ನು ಕಟ್ಟಿ ವಿನ್ಯಾಸಗೊಳಿಸಿ ಖುಷಿ ಪಡುವುದೇ ಈ ಹೇರ್ ಬ್ರೇಡಿಂಗ್.

ಮಂಗಳೂರಿನಿಂದ ಗೋವಾಕ್ಕೆ ಹೊರಟ ನಮ್ಮ ತಂಡದಲ್ಲಿ ಒಟ್ಟು ಮೂರು ಮಂದಿ ಯುವತಿಯರಿದ್ದೆವು. ನೀವು ಕೂಡ ಹೀಗೆ ಹೇರ್ ಬ್ರೇಡ್ ಮಾಡಿಸಿಕೊಳ್ಳಿ, ಎಂದು ಸಲಹೆ ನೀಡಿದವರು ನಮ್ಮ ತಂಡದ ಹಿರಿಯಣ್ಣ ಕಾರ್ತಿಕ್. ಅದರಂತೆ ತಲಾ 50 ರೂ. ದರದಲ್ಲಿ ನಾವು ಮೂರು ಜನ ಹೇರ್ ಬ್ರೇಡ್ ಮಾಡಿಸಿಕೊಂಡೆವು.

ವಿಶೇಷವೆಂದರೆ ಈ ಹೇರ್ ಬ್ರೇಡ್ ಮಾಡಿಕೊಡುವ ಮಹಿಳೆಯರು ಹಿಂದಿ ಮತ್ತು ಅಗತ್ಯವಿರುವ ಇಂಗ್ಲಿಷ್ ಭಾಷೆಯಲ್ಲಿ ಚೆನ್ನಾಗಿ ಮಾತನಾಡುತ್ತಾರೆ. ವಿಚಾರಿಸಿದಾಗ ತಿಳಿದದ್ದು ಇವರು ಮೂಲತಃ ನಮ್ಮ ಗದಗ ಜಿಲ್ಲೆಯವರೆಂದು. ನಾವು ಕನ್ನಡಿಗರೆಂದು ತಿಳಿದಾಗ ಅವರ ಮೊಗದಲ್ಲಿ ಮಂದಹಾಸ ಮೂಡಿ, ಕನ್ನಡದಲ್ಲೇ ಮಾತುಕತೆ ಮುಂದುವರಿಸಿದರು.

ಈ ವಿನ್ಯಾಸದಲ್ಲಿ ನಾಲ್ಕು ವಿವಿಧ ಬಣ್ಣದ, ಸುಮಾರು 10 ಇಂಚುಗಳಷ್ಟು ಉದ್ದದ ಉಣ್ಣೆಯ ದಾರವನ್ನು ಹಿಡಿದು ಕೂದಲಿನ ಕೆಲವು ಎಳೆಗಳ ಜತೆಗೆ ಹೆಣೆಯಲಾಗುತ್ತದೆ. ಹೀಗೆ ಸುಮಾರು ಒಂದೂವರೆ ಇಂಚಿನಷ್ಟು ಉದ್ದಕ್ಕೆ ಕೂದಲನ್ನು ದಾರದೊಂದಿಗೆ ಸೇರಿಸಿ ಹೆಣೆದು, ಕೊನೆಯಲ್ಲಿ ಗಂಟು ಹಾಕಲಾಗುತ್ತದೆ. ಅಷ್ಟೇ ಅಲ್ಲ, ಇದನ್ನು ಬಿಡಿಸುವುದು ಹೇಗೆ, ಯಾವ ದಾರವನ್ನು ಎಳೆದರೆ ಸುಲಭವಾಗಿ ಗಂಟು ಬಿಚ್ಚುವುದು ಎಂದೂ ಅವರು ಹೇಳಿಕೊಡುತ್ತಾರೆ. ಕೇವಲ ಮಹಿಳೆಯರು ಮಾತ್ರವಲ್ಲದೆ, ಉದ್ದನೆಯ ಕೂದಲು ಹೊಂದಿರುವ ಒಂದಷ್ಟು ಯುವಕರು ಕೂಡ ಹೇರ್ ಬ್ರೇಡ್ ಮಾಡಿಸಿಕೊಳ್ಳುತ್ತಿದ್ದುದು ಅಲ್ಲಿನ ವಿಶೇಷವಾಗಿತ್ತು.

ನಿಮ್ಮ ಆಯ್ಕೆಯಂತೆ ಒಂದು, ಎರಡು ಅಥವಾ ಮೂರು... ಹೀಗೆ ಎಷ್ಟು ಬೇಕಾದರೂ ಜಡೆಗಳನ್ನು ಹಾಕಿಸಿಕೊಳ್ಳಬಹುದು. ಈ ಸೇವೆಯ ದರ ಒಂದು ಜಡೆಗೆ ಕೇವಲ 50 ರೂ.ಗಳು. ನಾವು ಮೂರು ಜನ ತಲಾ ಒಂದೊಂದು ಬ್ರೇಡ್ ಹಾಕಿಸಿಕೊಂಡೆವು.

ಹೇರ್ ಬ್ರೇಡಿಂಗ್ ಎನ್ನುವುದು ಕೇವಲ ಟ್ರೆಂಡ್ ಅಥವಾ ಫ್ಯಾಷನ್ ಆಗಿರದೆ, ಅಲ್ಲಿನ ಮಹಿಳೆಯರ ಆರ್ಥಿಕ ಸ್ವಾವಲಂಬನೆಗೂ ದಾರಿಯಾಗಿದೆ. ಬೆಳಗ್ಗೆ 8:00 ಗಂಟೆಯಿಂದ ರಾತ್ರಿ 12 ಅಥವಾ 1 ಗಂಟೆಯ ತಡರಾತ್ರಿಯ ವರೆಗೂ ಈ ಕಡಲ ತೀರದಲ್ಲಿ ಸುಮಾರು 10ರಿಂದ 15 ಮಹಿಳೆಯರು ಕಾರ್ಯನಿರತರಾಗಿರುತ್ತಾರೆ. ಇವರು ಪ್ರತಿದಿನ ನೂರಾರು ಯುವತಿಯರಿಗೆ ಕೇಶವಿನ್ಯಾಸ ಮಾಡಿ ಆದಾಯ ಗಳಿಸುತ್ತಾರೆ. ಈ ಕೆಲಸಕ್ಕೆ ಬಂಡವಾಳ ತೀರಾ ಕಡಿಮೆಯಾಗಿರುವುದರಿಂದ, ಶ್ರಮಕ್ಕೆ ತಕ್ಕ ಆರ್ಥಿಕ ಲಾಭ ಸಿಗುತ್ತದೆ. ಇದರಿಂದ ಹೊಟ್ಟೆಪಾಡಿಗಾಗಿ ಬೇರೆ ಊರಿನಿಂದ ವಲಸೆ ಬಂದವರಿಗೆ ಉತ್ತಮ ಆರ್ಥಿಕ ಅವಕಾಶ ದೊರೆತಂತಾಗಿದೆ.

ಮುಂದಿನ ಬಾರಿ ನೀವು ಗೋವಾಕ್ಕೆ ಹೋದಾಗ, ಮರೆಯದೇ ಈ 'ಹೇರ್ ಬ್ರೇಡ್' ಮಾಡಿಸಿಕೊಳ್ಳಿ.



ಅಶ್ವಿನಿ ಚಂದ್ರ
ಸಂತ ಅಲೋಶಿಯಸ್ (ಪರಿಗಣಿತ ವಿವಿ), ಮಂಗಳೂರು

# Digital News Links

1. **Mangaluru: Constitution Day & Ambedkar commemoration held at St Aloysius College** https://www.daijiworld.com/news/newsDisplay?newsID=1300085

2. **St Aloysius to host English adaptation of classic Sanskrit farce 'Yogi Vs Bhogi' on Dec 10** https://www.daijiworld.com/news/newsDisplay?newsID=1300285

3. **Director of AIMIT centre Fr Kiran holds special session at XIM University in Bhubaneshwar** https://www.daijiworld.com/news/newsDisplay?newsID=1300347

4. **St Aloysius (Deemed to be University) - 146-year legacy of forming men & women for and with others** https://www.daijiworld.com/news/newsDisplay?newsID=1300381

5. **A 146-Year Legacy of Forming Men and Women For and With Others** https://newskarnataka.com/education/a-146-year-legacy-of-forming-men-and-women-for-and-with-others/11122025

6. **St Aloysius University holds award ceremony of certificate course in senior care** https://www.daijiworld.com/news/newsDisplay?newsID=1300515

7. **MRPL staff attend two-day managerial skill development programme at AIMIT** https://www.daijiworld.com/news/newsDisplay?newsID=1300560

8. **St Aloysius University holds guest talk on Onake Obavva** https://www.daijiworld.com/news/newsDisplay?newsID=1300580

9. **Engineering faculty of St Aloysius participate in academic, mentorship and health-skills engagements** https://www.daijiworld.com/news/newsDisplay?newsID=1300859